ಪುತ್ತೂರಿಗೆ ನೇತ್ರಾವತಿ ನದಿ ನೀರಿನ ಪೂರೈಕೆಯ ಬಗ್ಗೆ

೨-೦೦ ಪಿ. ಎಂ.

ಶ್ರೀ ವಿನಯಕಂಮಾರ್ ಸೊರಕೆ— ನೇತ್ರಾವತಿ ನದಿ ನೀರಿನ ಸರಬರಾಜಿನ ಬಗ್ಗೆ ನಾನು ಹಾಗೂ ಮಾನ್ಯ ಮುಲ್ಲಾರಗೌಡ ಪಾಟೀಲ್ ಮತ್ತು ಶಿವಣ್ಣನವರು ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ನಗರಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ನಗರಾಭಿವೃದ್ಧಿ ಸಚಿವರು).—

ಪುತ್ತೂರು ಪಟ್ಟಣಕ್ಕೆ ನೇತ್ರಾವತಿ ನದಿಯಿಂದ ಕೊಳವೆ ಮೂಲಕ ನೀರು ಸರಬರಾಜು ಮಾಡುವ ಬಗ್ಗೆ ಪ್ರಾರಂಭೋತ್ಸವವನ್ನು ನೇರವೇರಿಸಲಾಗಿದೆಯೆಂದೂ ಮತ್ತು ಈ ಯೋಜನೆಯಿಂದ ನೀರು ಸರಬರಾಜಾಗುತ್ತಿಲ್ಲವೆಂದೂ ಹಾಗೂ ಈ ವಿಳಂಬಕ್ಕೆ ಕಾರಣರಾದವರ ಮೇಲೆ ಸರ್ಕಾರ ಕ್ರಮ ತೆಗೆದು ಕೊಂಡಿರುವುದರ ಬಗ್ಗೆ ಗಮನ ಸೆಳೆಯುವ ಸೂಚನೆಯ ನಗರಾಭಿವೃದ್ಧಿ ಸಚಿವರು ತಮ್ಮ ಹೇಳಿಕೆ ಕೊಡ ಬೇಕೆಂದು ಕೇಳಿದ್ದಾರೆ.

ಆದರೆ ಪುತ್ತೂರು ಪಟ್ಟಣಕ್ಕೆ ನೇತ್ರಾವತಿ ನದಿಯ ಉಪನದಿಯಾದ ಕುಮಾರ ಧಾರಾ ನದಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿದ್ದು, ಈ ಯೋಜನೆಯ ಪ್ರಾರಂಭೋತ್ಸವವನ್ನು ಪ್ರಸಕ್ತ ಮಾನುಗಾರಿಕೆ ಮಂತ್ರಿಗಳು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಅಧ್ಯಕ್ಷರಾಗಿದ್ದಾಗ ದಿನಾಂಕ ೧೧-೪-೧೯೮೪ರಂದು ನೆರವೇರಿಸಿದ್ದರು. ಈ ಯೋಜನೆಯಲ್ಲಿ ಅಳವಡಿಸಲಾಗಿದ್ದ ಎಲ್ಲಾ ಕಾರ್ಯಗಳನ್ನೂ ಪೂರ್ಣಗೊಳಿಸಿ ದಿನಾಂಕ ೩೦-೧೧-೧೯೮೫ರಿಂದ ಶುದ್ಧೀಕರಿಸಿದ ನೀರನ್ನು ಪುರಜನರಿಗೆ ಪೂರೈಸಲಾಗುತ್ತಿದೆ. ಆದ ಕಾರಣ ಈ ಕಾರ್ಯದಲ್ಲಿ ವಿಳಂಬ ವುಂಟಾಗಿರುವುದಿಲ್ಲ.

ಪುತ್ತೂರು ಪಟ್ಟಣದ ಜನಸಂಖ್ಯೆ ೧೯೮೧ರ ಜನಗಣತಿಯ ಪ್ರಕಾರ ೨೦,೧೦೩ ಇರುತ್ತದೆ. ಪುತ್ತೂರು ಪಟ್ಟಣದ ನೀರು ಸರಬರಾಜು ಯೋಜನೆಯ ೫೬.೦೦ ಲಕ್ಷ ರೂಪಾಯಿಗಳ ಅಂದಾಜು ವೆಚ್ಚಕ್ಕೆ ಸರ್ಕಾರವು ನೀಡಿದ ಆಡಳಿತಾತ್ಮಕ ಅನುಮೋದನೆಯ ಮೇರೆಗೆ ಈ ಯೋಜನೆಯನ್ನು ೨೦೦೧ನೇ ಇಸವಿಯಲ್ಲಿ ನಿರೀಕ್ಷಿಸಲಾದ ೩೭,೦೦೦ ಜನಸಂಖ್ಯೆಗೆ ತಲಾ ದಿನಂಪ್ರತಿ ೧೧೪ ಲೀಟರ್ ನೀರನ್ನು ಒದಗಿಸುವಂತೆ ರೂಪಿಸಲಾಗಿತ್ತು. ಈ ಯೋಜನೆಯ ಕೆಲಸವನ್ನು ೧೯೭೯ರಲ್ಲಿ ಕೈಗೆತ್ತಿಕೊಳ್ಳಲಾಯಿತು. ಈ ಯೋಜನೆಯಲ್ಲಿ ಅಳವಡಿಸಲಾಗಿದ್ದ ೮ ಕೊಳವೆ ಬಾವಿಗಳನ್ನು ಕೊರೆದು ವಿತರಣಾ ವ್ಯವಸ್ಥೆಯ ಮೂಲಕ ಪರ್ಲಡ್ಕ, ದರ್ಭೆ, ಸಾಮೆತಡ್ಕ ಮತ್ತು ಕೊಂಬೆಟ್ಟು ಪ್ರದೇಶಗಳಿಗೆ ೧೯೮೫ರಲ್ಲಿ ನೀರು ಪೂರೈಸಲಾಯಿತು.

ಕುಮಾರಧಾರ ನದಿಯಿಂದ ನೀರನ್ನು ಒಳ ಬಾವಿಗಳ ಮುಖಾಂತರ ಜಾಕ್‌ವೆಲ್‌ನಲ್ಲಿ ಶೇಖರಿಸಿ ೬೦ ಅಶ್ವ ಶಕ್ತಿಯುಳ್ಳ ನೀರೆತ್ತುವ ಯಂತ್ರಗಳಿಂದ ೩೦೦ ಮಿ. ಮಿ. ವ್ಯಾಸದ ಎರಕದ ಕೊಳವೆಗಳ ಮೂಲಕ ೧೬೩೫ ಮೀ. ದೂರದಲ್ಲಿ ಇರುವ ಜಲಶುದ್ಧೀಕರಣಾಗಾರಕ್ಕೆ ಸಾಗಿಸಲಾಗುತ್ತಿದೆ. ಅಲ್ಲಿ ರನಿ ನ್ನು ಶುದ್ಧೀಕರಿಸಿ ೩೦೦ ಮಿ. ಮಿ. ವ್ಯಾಸದ ಎರಕದ ಕೊಳವೆಯ ಮೂಲಕ ೩೮೨೫ ಮೀ. ದೂರ ದಲ್ಲಿ ನಿರ್ಮಿಸಿರುವ ಒಂದು ಲಕ್ಷ ಲೀಟರ್ ಸಾಮರ್ಥ್ಯವಿರುವ ನೀರಿನ ತೊಟ್ಟಿಗೆ (ಬ್ರೇಕ್ ಪ್ರೆಶರ್ ಟ್ಯಾಂಕ್) ೭೫ ಅಶ್ವಶಕ್ತಿಯುಳ್ಳ ನೀರೆತ್ತುವ ಯಂತ್ರಗಳ ಸಹಾಯದಿಂದ ಸಾಗಿಸಲಾಗುತ್ತಿದೆ. ಈ ತೊಟ್ಟಿಯ ಮೂಲಕ ಮಂಗಳೂರು ಮಡಕೇರಿ ಹೆದ್ದಾರಿ ಬಳಿ ನಿರ್ಮಿಸಿರುವ ೯-೦೦ ಲಕ್ಷ ಲೀಟರ್ ಸಾಮರ್ಥ್ಯದ ವಿತರಣಾ ಜಲ ಸಂಗ್ರಾಹಾರಕ್ಕೆ ಗುರುತ್ವಾಕರ್ಷಣ ಶಕ್ತಿಯಿಂದ ನೀರನ್ನು ೩೫೦ ಮಿ. ಮಿ. ವ್ಯಾಸವುಳ್ಳ ಆರ್.ಸಿ.ಸಿ. ಕೊಳವೆ (೪೬೧೦ ಮೀಟರ್) ಹಾಗೂ ಎರಕದ ಕೊಳವೆಗಳ (೧೦೦೦ ಮೀಟರ್) ಮೂಲಕ ಸಾಗಿಸಲಾಗುತ್ತಿದೆ. ಈ ಯೋಜನೆಯ ಮುಖ್ಯ ಕೆಲಸಗಳಾದ ಕುಮಾರಧಾರಾ ನದಿಯಲ್ಲಿ ಒಳಬಾವಿ ನಿರ್ಮಾಣ ಪಂಪು ಮನೆಯ ನಿರ್ಮಾಣ ೩೦ ಎಂ.ಎಂ. ವ್ಯಾಸದ ಏರು ಕೊಳವೆ ಮಾರ್ಗ ಎರಡು ಲಕ್ಷ ಲೀಟರ್ ಸಾಮರ್ಥ್ಯದ (ಶುದ್ಧ ನೀರಿನ) ಜಲಸಂಗ್ರಾಹಾರ, ಕೋಡಿಯಾಡಿಯಲ್ಲಿ ಒಂದು ಲಕ್ಷ ಲೀಟರ್ ಸಾಮರ್ಥ್ಯದ ನೀರಿನ ತೊಟ್ಟಿ (ಬ್ರೇಕ್ ಪ್ರೆಶರ್ ಟ್ಯಾಂಕ್) ೩೫೦ ಎಂ. ಎಂ. ವ್ಯಾಸದ ಸಿಮೆಂಟ್ ಹಾಗೂ ಎರಕದ ಗುರುತ್ವಾಕರ್ಷಕ ಕೊಳವೆ ಮಾರ್ಗವನ್ನು ಜುಲೈ ೧೯೮೫ರಲ್ಲಿ ಪೂರ್ಣಗೊ

ಳಿಸಿ ನದಿ ನೀರನ್ನು ನೇರವಾಗಿ ವಿತರಣಾ ವ್ಯವಸ್ಥೆಯ ಮೂಲಕ ಸರಬರಾಜು ಮಾಡಲಾಯಿತು. ಪುತ್ತೂರಿನ ಶೆಟ್ಟಿಗುಡ್ಡೆಯಲ್ಲಿ ಯೋಜಿಸಲಾದ ೯ ಲಕ್ಷದ ಲೀಟರ್ ಸಾಮರ್ಥ್ಯದ ವಿತರಣಾ ಸಂಗ್ರಹಾಗಾರ ಪೂರ್ಣವಾಗದೆ ಇದ್ದುದರಿಂದ ಹೀಗೆ ನೇರವಾಗಿ ವಿತರಣಾ ವ್ಯವಸ್ಥೆಗೆ ಕಲ್ಪಿಸಲಾಯಿತು.

ದಿನಾಂಕ ೧೧-೪-೧೯೮೫ರಂದು ಸದರಿ ಯೋಜನೆಯನ್ನು ಪುರಸಭೆಯ ಹಾಗೂ ಸ್ಥಳೀಯ ಶಾಸಕರ ಇಚ್ಛಾನುಸಾರ ಔಪಚಾರಿಕವಾಗಿ ಉದ್ಘಾಟಿಸಲಾಯಿತು.

ಏಪ್ರಿಲ್ ೧೯೮೫ರಲ್ಲಿ ಶೆಟ್ಟಿಗುಡ್ಡೆಯಲ್ಲಿ ೯.೦೦ ಲಕ್ಷ ಲೀಟರ್ ಸಾಮರ್ಥ್ಯದ ವಿತರಣಾ ಜಲ ಸಂಗ್ರಹಾಗಾರವನ್ನು ಪೂರ್ಣಗೊಳಿಸಲಾಯಿತು. ಈ ಕೆಲಸವನ್ನು ಟೆಂಡರ್ ಮೇರೆ ತೆಗೆದುಕೊಂಡಿದ್ದ ಗುತ್ತಿಗೆದಾರರು ಕೆಲಸದ ಪ್ರಗತಿಯಲ್ಲಿ ವಿಳಂಬ ಮಾಡಿದುದರಿಂದ ಈ ಕಾರ್ಯ ನಿಧಾನವಾಯಿತು.

ವಿತರಣಾ ಜಲಸಂಗ್ರಹಾಗಾರಕ್ಕೆ ನೀರನ್ನು ತುಂಬಿಸಲು ಪ್ರಾರಂಭಿಸಿದಾಗ ಗುರುತ್ವಾಕರ್ಷಣ ಕೊಳವೆ ಮಾರ್ಗದಲ್ಲಿ ಹಲವು ಅಡಚಣೆಗಳು ಕಂಡು ಬಂದು ಇವುಗಳನ್ನು ದುರಸ್ತಿ ಮಾಡಲಾಯಿತು. ಆರಂಭಿಕ ತೊಂದರೆಗಳು ಈಗ ನಿವಾರಣೆಯಾಗಿ ಈಗ ಕೊಳವೆ ಮಾರ್ಗ ಸುಸ್ಥಿತಿಗೆ ಬಂದಿರುತ್ತದೆ.

ದಿನಾಂಕ ೨೬.೧೯೮೫ರಿಂದ ಪುತ್ತೂರು ಶೆಟ್ಟಿಗುಡ್ಡೆಯ ವಿತರಣಾ ಜಲಸಂಗ್ರಹಾಗಾರದಲ್ಲಿ ನೀರು ಶೇಖರಿಸಿ ವಿತರಣಾ ವ್ಯವಸ್ಥೆಯ ಮೂಲಕ ನೀರು ಪೂರೈಸಲಾಗುತ್ತಿದೆ. ಜಲಶುದ್ಧೀಕರಣಗಾರದ ಕೆಲಸವು ಪೂರ್ಣಗೊಂಡು ದಿನಾಂಕ ೩೦-೧೧-೧೯೮೫ರಿಂದ ಶುದ್ಧೀಕರಿಸಿದ ನೀರನ್ನು ಪುರಜನರಿಗೆ ಪೂರೈಸಲಾಗುತ್ತಿದೆ.

ಪ್ರಸ್ತುತ ಪುತ್ತೂರಿನ ನಿವಾಸಿಗಳಿಗೆ ತಲಾ ದಿನಂಪ್ರತಿ ಸುಮಾರು ೮೦ ಲೀಟರ್ ನೀರು ಸರಬರಾಜು ಮಾಡಲಾಗುತ್ತಿದೆ.

ಶ್ರೀ ವಿನಯಕುಮಾರ್ ಸೂರ್ಕೆ — ಮಾನ್ಯ ಮಂತ್ರಿಗಳು ನೀಡಿರುವಂತಹ ಹೇಳಿಕೆ ಸತ್ಯಕ್ಕೆ ದೂರ ವಾದುದು. ತಪ್ಪು ತಿಳುವಳಿಕೆಯನ್ನು ಇಲ್ಲಿ ಕೊಡುತ್ತಿದ್ದಾರೆ. ಇಲ್ಲಿಗೆ ಶಾಸಕನಾಗಿ ಬಂದ ನಂತರ ಈ ಸದನದಲ್ಲಿ ಹಲವಾರು ಬಾರಿ ಪುತ್ತೂರಿನ ಕುಡಿಯುವ ನೀರಿನ ಸರಬರಾಜಿನ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಕೂಡಲೇ ಅದನ್ನು ನಿವಾರಣೆ ಮಾಡಿಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದರು. ಇದು ವಾಸ್ತವಿಕವಾದ ವಿಚಾರ. ಎರಡು ವರ್ಷಗಳ ಹಿಂದೆ ಮಾನ್ಯ ಸಚಿವರು ಅರಬನ್ ವಾಟರ್ ಸಪ್ಲೈ ಅಧ್ಯಕ್ಷರಾಗಿದ್ದರು. ಆಗ ಅವರು ಕೊಳವೆ ಬಾವಿಯ ನೀರನ್ನು ಒದಗಿಸಿ ನಿಮಗೆ ನೇತ್ರಾವತಿ ನೀರನ್ನು ಕೊಟ್ಟಿದ್ದೇವೆ ಎಂಬ ತಪ್ಪು ಹೇಳಿಕೆಯನ್ನು ಕೊಟ್ಟು ಜನರನ್ನು ತಪ್ಪುದಾರಿಗೆ ಎಳೆಯುತ್ತಾ ಇದ್ದಾರೆ. ನೇತ್ರಾವತಿ ನದಿ ನೀರಿನ ಸರಬರಾಜಿನ ಬಗ್ಗೆ ಪ್ರಯತ್ನ ನಡೆಯುತ್ತಾ ಬಂದಿದೆ. ಕೊಳವೆ ಬಾವಿಗಳು ಸಂಪೂರ್ಣವಾಗಿ ಒಡೆದುಹೋಗುತ್ತವೆ ಎಂಬ ತಿಳುವಳಿಕೆ ಪುತ್ತೂರಿನ ಜನಸಾಮಾನ್ಯರಲ್ಲಿ ಬಂದಿದೆ. ಇದರಲ್ಲಿ ಬಹು ದೊಡ್ಡ ಅವ್ಯವಹಾರ ನಡೆದಿದೆ. ಈ ಕೆಲಸ ಕಾರ್ಯಗಳು ಒಳ್ಳೆಯ ರೀತಿಯಲ್ಲಿ ನಡೆದು ಬಂದಿಲ್ಲ. ಇದು ಒಳ್ಳೆಯ ಹಾದಿಯಲ್ಲಿ ಬರುವುದಿಲ್ಲ ಎನ್ನುವ ತಪ್ಪು ಅಭಿಪ್ರಾಯ ಜನರಲ್ಲಿ ಬಂದಿದೆ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಇದನ್ನು ತನಿಖೆ ನಡೆಸಿ ಅಲ್ಲಿ ಅವ್ಯವಹಾರ ನಡೆದಿದ್ದರೆ ಯಾವ ರೀತಿಯಲ್ಲಿ ಅದನ್ನು ಸರಿಪಡಿಸಬಹುದು ಎಂಬುದನ್ನು ತಿಳಿಯಬೇಕು. ಪುತ್ತೂರು ಪಟ್ಟಣಕ್ಕೆ ನೀರು ಸರಬರಾಜು ಮಾಡಿ ಜನರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಬೇಕು. ಮಂತ್ರಿಗಳು ಇದರ ಕಡೆಗೆ ಗಮನವನ್ನು ಕೊಡಬೇಕು. ತಪ್ಪಿತಸ್ಥರಲ್ಲಿ ತಕ್ಕ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ — ಮಾನ್ಯ ಸದಸ್ಯರು ಸತ್ಯಕ್ಕೆ ದೂರವಾದುದುಯೆಂದು ಹೇಳಿದ್ದಾರೆ. ಯಾವ ರೀತಿ ಸತ್ಯಕ್ಕೆ ದೂರವಾಗಿದೆ ಎಂಬುದರ ಬಗ್ಗೆ ಅವರು ಯಾವ ವಿವರಣೆಯನ್ನು ಕೊಟ್ಟಿಲ್ಲ ಮತ್ತು ಹಿಂದಿ ಮಂತ್ರಿಗಳು ಎಂದು ಹೇಳಿದ್ದಾರೆ. ಹಿಂದಿನ ಮಂತ್ರಿಗಳು ಎಂದರೆ ಮಾನ್ಯ ಬೈರೇಗೌಡರು ಅವಾಗ ಅಧ್ಯಕ್ಷರಾಗಿರಲಿಲ್ಲ. ಅವರು ಕರ್ನಾಟಕ ನಗರ ನೀರು ಸರಬರಾಜಿನ ಮಂಡಳಿಯ ಅಧ್ಯಕ್ಷರಾಗಿದ್ದರು. ಅವರು ಅವಾಗ ಏನು ಹೇಳಿದರೋ ನನಗೆ ಗೊತ್ತಿಲ್ಲ. ಆದರೆ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೆ ತೆಗೆದುಕೊಂಡಿದ್ದೇವು ಅದನ್ನೆಲ್ಲಾ ಪೂರೈಸಿದ್ದೇವೆ. ಆಲ್ಲಿ ನೀರು ಸೋರುತ್ತಾ ಇರುವುದು ನಿಜ. ಪ್ರಾರಂಭಿಕ ತೊಂದರೆಗಳು ಇದ್ದವು. ಅದನ್ನು ಈಗ ಸರಿಪಡಿಸುವುದರಿಂದ ನೀರು ಸರಾಗ

ವಾಗಿ ಪುತ್ತೂರಿಗೆ ಸರಬರಾಜಾಗುತ್ತಿದೆ. ವಿಳಂಬ ಆಗಿತ್ತು. ಈಗ ಪೂರ್ಣವಾಗಿ ಮಾಡಿದ್ದೇವೆ, ಕಂಟ್ರ್ಯಾಕ್ಟ್ ತೆಗೆದುಕೊಂಡಿದ್ದರಿಂದ ಸ್ವಲ್ಪ ನಿಧಾನವಾಯಿತು ಅಷ್ಟೇ.

ಅಧ್ಯಕ್ಷರು— ಸರಿಪಡಿಸುತ್ತೇವೆಂದು ಹೇಳಿದ್ದಾರೆ ಅದಕ್ಕಿಂತಲೂ ಇನ್ನೂ ಹೆಚ್ಚಾಗಿ ಬೇಕೇ?

ಶ್ರೀ ರತ್ನಾಕರ್ ಪಟ್ಟಮುಕ್ಕಿ— ಮೊನ್ನೆ ಡಿಲಿಗೇಷನ್ ಬಂದಿತು. ಅದನ್ನು ಸರಿಪಡಿಸುವವರೆ ವಿಗೂ ಅವರು ಊರಿಗೆ ಹೋಗುವ ಹಾಗೆ ಇಲ್ಲ.

ಅಧ್ಯಕ್ಷರು— ನೀವು ಏಕೆ ಅವರ ಪರವಾಗಿ ವಕಾಲತ್ ವಹಿಸುತ್ತೀರಾ?

ಶ್ರೀ ವಿನಯಕುಮಾರ್ ಸೊರ್ಕೆ.—ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲಾ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಈ ನೀರು ಸರಬರಾಜಿನ ಬಗ್ಗೆ ಪ್ರಸ್ತಾಪ ಮಾಡುವ ಕಾಲದಲ್ಲಿ ಅಧಿಕಾರಿಗಳು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಎಂದರೆ, ನೀರು ಬಹಳ ಜೋರಾಗಿ ಆ ಪೈಪ್‌ನ ತುಂಬಾ ಹರಿಯುವುದರಿಂದ ಅದರ ಒತ್ತಡವನ್ನು ಆ ಪೈಪು ತಡೆದುಕೊಳ್ಳಲಾಗದೆ ಒಡೆದು ಹೋಗಿದೆ ಎಂದು ತಿಳಿಸಿದರು. ಈ ಮಾತನ್ನು ಅವರೇ ಒಪ್ಪಿಕೊಂಡಿದ್ದಾರೆ. ಅಲ್ಲಿ ಹಾಕಿರತಕ್ಕ ಪೈಪು ಅತ್ಯಂತ ಕೆಳಪೆ ಗುಣಮಟ್ಟದ್ದು. ಈ ಅಂಶವನ್ನು ಸರ್ಕಾರದವರು ಗಮನಿಸಿ ಸೂಕ್ತ ಕ್ರಮ ತೆಗೆದುಕೊಂಡು ಆ ಪೈಪನ್ನು ಬದಲಾವಣೆ ಮಾಡಿ ಗಟ್ಟಿಯಾದ ಪೈಪನ್ನು ಹಾಕಿಸಬೇಕು. ಮತ್ತು ಅಲ್ಲಿ ನಡೆದಿರತಕ್ಕ ಅವ್ಯವಹಾರದ ಬಗ್ಗೆಯೂ ಕೂಡ ತನಿಖೆ ಮಾಡಿಸಬೇಕೆಂದು ನಾನು ಹೇಳಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಪ್ರಾರಂಭದಲ್ಲಿ ಆ ಪೈಪ್‌ನಲ್ಲಿ ನೀರು ಸೋರುತ್ತಿದ್ದುದನ್ನು ನಾನೇ ಒಪ್ಪಿಕೊಂಡಿದ್ದೇನೆ. ನಾನೇನೂ ಇವತ್ತು ಇದ್ದು ನಾಳೆ ಓಡಿಹೋಗುವವನಲ್ಲ. ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ಸೂಕ್ತ ಉತ್ತರವನ್ನು ಕೊಟ್ಟಿದ್ದೇನೆ. ಇದರ ಮೇಲೆಯೂ ಅವರು ಪ್ರಶ್ನೆಯನ್ನು ಕೇಳುವುದಾದರೆ ಅದಕ್ಕೂ ಉತ್ತರವನ್ನು ಕೊಡುತ್ತೇನೆ. ಒಂದು ಮೇಳೆ ನಾನು ಕೊಡತಕ್ಕ ಉತ್ತರ ಸರಿಯಲ್ಲವೆಂದು ಹೇಳುವುದಾದರೆ ಆ ಪ್ರಶ್ನೆ ಬೇರೆಯಾಗುತ್ತದೆ. ಆದರೆ ಈ ರೀತಿ ಪದೇಪದೇ ಎದ್ದುನಿಂತು ಪ್ರಶ್ನೆ ಕೇಳುವುದಾದರೆ ಅವರ ಸಮಸ್ಯೆ ಪರಿಹಾರ ವಾಗುವುದಿಲ್ಲ. ನಾನು ಉತ್ತರ ಕೊಟ್ಟಿರುವುದರಲ್ಲಿ ಏನಾದರೂ ತಪ್ಪಿದ್ದರೆ ಅದನ್ನು ಬೇಕಾದರೆ ತಿಳಿಸಿ. ನಾಳೆ ನಮ್ಮ ಅಧಿಕಾರಿಗಳನ್ನು ಕಳುಹಿಸಿ ಅದನ್ನು ಪರಿಶೀಲಿಸಿ ಒಂದು ವರದಿಯನ್ನು ತರಿಸಿಕೊಳ್ಳುತ್ತೇನೆ. ತಾವೂ ಬೇಕಾದರೆ ಹೋಗಿ ನೋಡಿಕೊಂಡು ಬನ್ನಿ. ಈಗಲೂ ನೀರು ಸರಿಯುತ್ತಿದ್ದರೆ ಮುಂದಿನ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಪ್ರತಿದಿನ ಪ್ರತಿಯೊಬ್ಬರಿಗೂ ೧೧೪ ಲೀಟರ್ ನೀರನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಈಗ ನೀವು ಕೊಡುತ್ತಿರುವುದು ೮೦ ಲೀಟರ್ ಮಾತ್ರ. ಆದರೆ ಇಷ್ಟು ನೀರೂ ಕೂಡ ಬರುತ್ತಿಲ್ಲ ಎನ್ನುವ ಒಂದು ಆಪಾದನೆ ಇದೆ. ಇದರಲ್ಲಿ ಏನಾದರೂ ವ್ಯತ್ಯಾಸವಾದರೆ ದಯವಿಟ್ಟು ಸರಿಪಡಿಸಿಕೊಡಬೇಕು. ಏಕೆಂದರೆ ಈಗ ಬೇಸಿಗೆ ಬರುತ್ತಿರುವುದರಿಂದ ಜನರಿಗೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ನಿಮ್ಮ ಲೆಕ್ಕದ ಪ್ರಕಾರ ೧೧೪ ಲೀಟರ್ ಪ್ರಕಾರ ಏನಾ ನೀರನ್ನು ಕೊಡಬೇಕು ಅದನ್ನು ಕೊಡಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಈಗ ೮೦ ಲೀಟರ್ ಪ್ರಕಾರ ಕೊಡುತ್ತಿದ್ದೇವೆ. ಆದರೆ ಇವರು ನೀರೇ ಬರುತ್ತಿಲ್ಲವೆಂದು ಹೇಳುತ್ತಿದ್ದಾರೆ. ಮೊದಲು ನೀರನ್ನು ಸರಬರಾಜು ಮಾಡಲು ಪ್ರಾರಂಭ ಮಾಡಿದಾಗ ಪೈಪ್‌ನಲ್ಲಿ ನೀರು ಸೋರುತ್ತಿತ್ತು ಎಂದು ಹೇಳಿದ್ದೇನೆ. ತದನಂತರ ಅದನ್ನು ಸರಿಪಡಿಸಿದ್ದೇವೆ. ಈಗ ನೀರು ಸುರಿಯುತ್ತಿಲ್ಲ. ನಿಂತಿದೆ ಎನ್ನುವ ಮಾತನ್ನೂ ಹೇಳಿದ್ದೇನೆ. ಆದರೂ ಮಾನ್ಯ ಸದಸ್ಯರು ಇನ್ನೂ ನೀರು ಸೋರುತ್ತಿದೆಯೆಂದು ಹೇಳುತ್ತಿದ್ದಾರೆ. ನಾನಾದರೂ ಮಾನ್ಯ ಸದಸ್ಯರಿಗೆ ಹೇಳುತ್ತೇನೆ, ನಾಳೆ ನಾಡಿದ್ದು ರಜಾ ಇದೆ. ನಮ್ಮ ಅಧಿಕಾರಿಗಳನ್ನು ಕಳುಹಿಸಿಕೊಟ್ಟು ಅಲ್ಲಿ ಪೈಪ್‌ನಿಂದ ಇನ್ನೂ ನೀರು ಸುರಿಯುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರೀಕ್ಷಿಸಿಕೊಂಡು ಬಂದು ನಮಗೆ ಒಂದು ವರದಿಯನ್ನು ಕೊಡುವಂತೆ ಹೇಳುತ್ತೇನೆಂದೂ ಕೂಡ ನಾನು ಹೇಳಿದ್ದೇನೆ. ಆದರೆ ನೀವು ಈ ರೀತಿ ಪದೇ ಪದೇ ಎದ್ದುನಿಂತು ಪ್ರಶ್ನೆಯನ್ನು ಕೇಳುವುದಾದರೆ ನಿಮಗೆ ಸೂಕ್ತ ಉತ್ತರ ಸಿಕ್ಕುವುದಿಲ್ಲ.